# ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರಂತರ ಕಲ್ಲು

ಭಿನ್ನಾಭಿಪ್ರಾಯಗಳನ್ನು ಹೊಂದಿರುವವರು ಹಾಗೂ ವಿಮರ್ಶಕರನ್ನು ಹತ್ತಿಕ್ಕುವ ಪ್ರಯತ್ನಗಳು ದೇಶದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವುದಕ್ಕೆ ಪ್ರಸಿದ್ಧ ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳಾದ ವೀರ್ ದಾಸ್ ಮತ್ತು ಮುನವ್ವರ್ ಫಾರೂಕಿ ಅವರು ಎದುರಿಸುತ್ತಿರುವ ವಿರೋಧ ಉದಾಹರಣೆಯಾಗಿವೆ. ಭಿನ್ನಮತ ಹೊಂದಿರುವವರು ಮುಸ್ಲಿಂ ಆಗಿದ್ದರಂತೂ ಅವರನ್ನು ಕುಗ್ಗಿಸುವ ಎಲ್ಲ ಪ್ರಯತ್ನಗಳೂ ನಡೆಯುತ್ತಿವೆ. ಈ ಘಟನೆಗಳು ವಿನೋದಪ್ರಜ್ಞೆ, ಸಂವಾದಗಳಿಗೆ ಇದು ಕಾಲವಲ್ಲ ಎನ್ನುವುದನ್ನು ಸೂಚಿಸುವಂತಿವೆ.

19

ಅಮೆರಿಕದಲ್ಲಿ ನೀಡಿದ ಕಾರ್ಯಕ್ರಮದಲ್ಲಿ ವೀರ್ ದಾಸ್, 'ಎರಡು ರೀತಿಯ ಭಾರತ'ಗಳ ಅಸ್ತಿತ್ವದ ಬಗ್ಗೆ ಮಾರ್ಮಿಕವಾಗಿ ಮಾತನಾಡಿದ್ದರು. ರೈತರ ಹೋರಾಟ, ಅತ್ಯಾಚಾರ ಪ್ರಕರಣಗಳು, ಕೊರೊನಾ ವಿರುದ್ಧದ ಹೋರಾಟ ಸೇರಿದಂತೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ಭಾರತದಲ್ಲಿ ವಿರೋಧಾಭಾಸದ ಮನಸ್ಥಿತಿ ಇರುವುದನ್ನು ವಿಡಂಬಿಸಿದ್ದರು. ಈ ವಿಡಂಬನೆಗೆ ಹಿಂದುತ್ವವಾದಿಗಳು ಕೆರಳಿ, ವೀರ್ ದಾಸ್ ಅವರನ್ನು ಟ್ರೋಲ್ ಮಾಡಿದ್ದಾರೆ.

ಬೆಂಗಳೂರಿನಲ್ಲಿ ನಡೆಯಬೇಕಾಗಿದ್ದ ಮುನವ್ವರ್ ಫಾರೂಕಿ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮಕ್ಕೂ ಹಿಂದುತ್ವವಾದಿಗಳ ವಿರೋಧ ಎದುರಾಯಿತು. ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗಬಹುದೆನ್ನುವ ಬೆಂಗಳೂರು ಪೊಲೀಸರ ಊಹೆಯ ಆಧಾರದ ಮೇಲೆ ಸಂಘಟಕರು ಕಾರ್ಯಕ್ರಮವನ್ನು ರದ್ದುಗೊಳಿಸಿದರು. ಸಾರ್ವಜನಿಕ ಸೌಹಾರ್ದತೆಗೆ ಯಾರಿಂದಲಾದರೂ ಭಂಗ ಉಂಟಾಗಬಹುದು ಎನ್ನುವ ಅನುಮಾನ ಉಂಟಾದಾಗ, ಆತಂಕಕ್ಕೆ ಕಾರಣ ಆಗುವವರ ಮೇಲೆ ಕ್ರಮ ಕೈಗೊಳ್ಳಬೇಕಾದ, ಸಂವಿಧಾನವೇ ಕಲ್ಪಿಸಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಪರೋಕ್ಷವಾಗಿ ಮಾಡಲು ಹೊರಟಿದ್ದರ ಬಗ್ಗೆ ಟೀಕೆಗಳು ವ್ಯಕ್ತವಾದವು.

ಬಲಪಂಥೀಯ ಸಂಘಟನೆಗಳ ವಿರೋಧವನ್ನು ಮುನವ್ವರ್ ಕಳೆದೊಂದು ವರ್ಷದಿಂದ ನಿರಂತರವಾಗಿ ಅನುಭವಿಸುತ್ತಿದ್ದಾರೆ. ಹಿಂದೂ ದೇವರುಗಳಿಗೆ ಅವಹೇಳನ ಮಾಡಿದ ಆರೋಪದ ಮೇರೆಗೆ ಮಧ್ಯಪ್ರದೇಶ ಪೊಲೀಸರಿಂದ






ವೀರ್ ದಾಸ್



# ಡ್ರಗ್ಸ್ ಚಕ್ರವ್ಯೂಹ

ಮಾದಕ ವಸ್ತುಗಳ ಬಳಕೆ ಪ್ರಕರಣಗಳು ಈ ವರ್ಷದಲ್ಲಿ ಹೆಚ್ಚು ಸದ್ದು ಮಾಡಿದವು. ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ 2020ರ ಜೂನ್‌ನಲ್ಲಿ ಆತ್ಮಹತ್ಯೆಗೆ ಶರಣಾದ ನಂತರ ಬೆಳಕಿಗೆ ಬಂದ ಮಾದಕ ವಸ್ತು ಪ್ರಕರಣಗಳ ಸರಣಿ 2021ರಲ್ಲೂ ಮುಂದುವರಿಯಿತು. ಇದು ಕೇವಲ ಬಾಲಿವುಡ್‌ಗೆ ಸೀಮಿತವಾಗಲಿಲ್ಲ. ತೆಲುಗು ಹಾಗೂ ಕನ್ನಡ ಚಿತ್ರರಂಗದಲ್ಲೂ ಹಲವು ಪ್ರಕರಣಗಳು ದಾಖಲಾದವು. ಈ ಅವಧಿಯಲ್ಲಿ ಮಾದಕ ವಸ್ತು ಸೇವನೆ ಪ್ರಕರಣಗಳಲ್ಲಿ ಸಿಲುಕಿದವರಲ್ಲಿ ಚಿತ್ರನಟರು ಮತ್ತು ಅವರ ಮಕ್ಕಳ ಪ್ರಮಾಣವೇ ಹೆಚ್ಚು.

ಬಾಲಿವುಡ್, ಕನ್ನಡ ಚಿತ್ರರಂಗ ಮತ್ತು ಬೇರೆ ಚಿತ್ರರಂಗಗಳ ಎಲ್ಲಾ ಪ್ರಕರಣಗಳಲ್ಲಿ ಹೆಚ್ಚು ಸುದ್ದಿಯಾದದ್ದು ಮತ್ತು ಅನೀರಿಕ್ಷಿತ ತಿರುವು ಪಡೆದದ್ದು ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಸಿಲುಕಿಕೊಂಡ ಪ್ರಕರಣ.

ಮುಂಬೈ ಕಡಲ ತೀರದಾಚೆ ಐಷಾರಾಮಿ ಕ್ರೂಸ್ ಹಡಗಿನಲ್ಲಿ ನಡೆಯುತ್ತಿದ್ದ ಪಾರ್ಟಿಯೊಂದರ ಮೇಲೆ 'ಮಾದಕ ವಸ್ತು ನಿಯಂತ್ರಣ ಬ್ಯೂರೊ' (ಎನ್‌ಸಿಬಿ) ಮುಂಬೈ ಘಟಕದ ಅಧಿಕಾರಿಗಳು ದಾಳಿ ನಡೆಸಿದ್ದರು. 'ಪಾರ್ಟಿಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಮತ್ತು ಸೇವನೆ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಈ ದಾಳಿ ನಡೆಸಲಾಯಿತು. ನಮ್ಮ ಅಧಿಕಾರಿಗಳು ಗ್ರಾಹಕರ ಸೋಗಿನಲ್ಲಿ ಹಡಗಿನ ಟಿಕೆಟ್ ಖರೀದಿಸಿ ಪಾರ್ಟಿಯಲ್ಲಿ ಭಾಗಿಯಾಗಿದ್ದರು. ಅಲ್ಲಿ ಮಾದಕ ವಸ್ತು ಸೇವಿಸುತ್ತಿದ್ದವರನ್ನು ಸಾಕ್ಷ್ಯ ಸಮೇತ ಬಂಧಿಸಲಾಯಿತು' ಎಂದು 'ಎನ್‌ಸಿಬಿ' ಅಧಿಕಾರಿಗಳು ಹೇಳಿದ್ದರು.

20

ಈ ಪ್ರಕರಣದಲ್ಲಿ ಆರ್ಯನ್ ಖಾನ್‌ನನ್ನು ಮೊದಲ ಆರೋಪಿಯನ್ನಾಗಿ ಮಾಡಲಾಗಿತ್ತು. ಆರ್ಯನ್ ಖಾನ್ ಜಾಮೀನು ಅರ್ಜಿಯು ನ್ಯಾಯಾಲಯದ ಮುಂದೆ ಬಂದಂತೆ, ಪ್ರಕರಣವು ಬೇರೆ ಬೇರೆ ತಿರುವು ಪಡೆದುಕೊಳ್ಳುತ್ತಾ ಹೋಯಿತು. ಆರ್ಯನ್ ಖಾನ್ ಬಳಿ ಮಾದಕ ವಸ್ತು ಇರಲಿಲ್ಲ, ಆತ ಮಾದಕ ವಸ್ತು ಸೇವಿಸಿರಲಿಲ್ಲ, ಮಾದಕ ವಸ್ತುವಿಗೆ ಸಂಬಂಧಿಸಿದಂತೆ ಆರ್ಯನ್ ಖಾನ್ ನಡೆಸಿದ್ದ ವಾಟ್ಸ್‌ಆ್ಯಪ್ ಚಾಟ್ 2018ರದ್ದು ಎಂಬುದನ್ನು ಆತನ ವಕೀಲರು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು.

ಹಡಗಿನಲ್ಲಿ ನಡೆಯುತ್ತಿದ್ದ ಪಾರ್ಟಿಯ ಮೇಲೆ ಅಧಿಕಾರಿಗಳು ನಡೆಸಿದ ದಾಳಿಯ ಬಗ್ಗೆಯೇ ಪ್ರಶ್ನೆಗಳು ಎದ್ದವು. ಆರ್ಯನ್ ಖಾನ್ ಅವರನ್ನು ಪ್ರಕರಣದಿಂದ ಕೈಬಿಡಲು ಎನ್‌ಸಿಬಿ ಅಧಿಕಾರಿಗಳು 18 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪ್ರಕರಣದ ಪ್ರಮುಖ ಸಾಕ್ಷಿ ಹೇಳಿಕೆ ನೀಡಿದ್ದು, ಪ್ರಕರಣಕ್ಕೆ